# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 06-01-2021 ರಂದು ನಡೆದ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಜನವರಿ-2020 ರ ಮಾಹೆಯ ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 22-01-2021 ರಂದು ನೆಡೆಸಲಾಯಿತು.

### ಸಭೆಗೆ ಹಾಜರಿದ್ದವರ ವಿವರಗಳು

| ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್ | | ಮಾನ್ಯ ಶಾಸಕರು,<br>ಶಾಂತಿನಗರ ವಿಧಾನ ಸಭಾ ಕ್ಷೇತ್ರ |
|---|---|---|
| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
| 1 | ಶ್ರೀ. ಆರ್. ಶಿವಕುಮಾರ್ | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 2 | ಟಿ.ಡಿ. ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| 3 | ಶ್ರೀ. ಡಿ. ಮೂರ್ತಿ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 115 |
| 4 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 5 | ಚಂದ್ರಪ್ಪ ಕೆ ಬಿ | ಸಹಾಯಕ ಕಂದಾಯ ಅಧಿಕಾರಿಗಳು ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| 6 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |
| 7 | ಶ್ರೀನಿವಾಸ್ ಎಂ ಎನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 8 | ಸಿ ನಂಜುಂಡಯ್ಯ | ಕಿರಿಯ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ. (ಬೋರ್‌ವೆಲ್) |
| 10 | ರಂಗಯ್ಯ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 11 | ಮಂಜುನಾಥ | ಕಂದಾಯ ವಸೂಲಿಗಾರರು, ವಾರ್ಡ್ ನಂ. 115, ಬಿಬಿಎಂಪಿ |
| 12 | ಡಾ॥ ಶ್ರೀನಿವಾಸ್ | ಆರೋಗ್ಯ ವೈದ್ಯಾಧಿಕಾರಿಗಳು, ಶಾಂತಿನಗರ ವಲಯ |
| 13 | ಟಿ.ಎಸ್. ನಾಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 14 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 115 |
| 15 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |

| ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ | | |
|---|---|---|
| 16 | ಶ್ರೀಮತಿ. ಶಿವಗಾಮಿ | ವಾರ್ಡ್ ಸಮಿತಿ ಸದಸ್ಯರು |
| 17 | ಧಾಮ | ವಾರ್ಡ್ ಸಮಿತಿ ಸದಸ್ಯರು |
| 18 | ವಿ. ಆರ್. ಜಯ್ ಕುಮಾರ್ | ವಾರ್ಡ್ ಸಮಿತಿ ಸದಸ್ಯರು |
| 20 | ಮುಸ್ತಫಾ | ವಾರ್ಡ್ ಸಮಿತಿ ಸದಸ್ಯರು |
| 22 | ಸುಬ್ರಮಣಿ | ವಾರ್ಡ್ ಸಮಿತಿ ಸದಸ್ಯರು<br>(ಮಡಿವಾಳ ಮಾಚಿದೇವ ಅಸೋಸಿಯೇಷನ್) |

ದಿನಾಂಕ: 22-01-2021 ರಂದು ಮಧ್ಯಾಹ್ನ 3-00 ಗಂಟೆಗೆ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಉಪಸ್ಥಿತಿಯಲ್ಲಿ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಡಿ. ಮೂರ್ತಿ, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ಸನ್ಮಾನ್ಯ ಶಾಸಕರನ್ನು, ವಾರ್ಡ್ ಸಮಿತಿ ಅಧ್ಯಕ್ಷರು & ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

**ದಿನಾಂಕ: 06-01-2021 ರ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳ ವಿವರ:**

| ಕ್ರ. ಸಂ | ಚರ್ಚಿಸಿದ ವಿಷಯಗಳು | ಕ್ರಮಕೈಗೊಳ್ಳಬೇಕಾ ಅಧಿಕಾರಿಗಳ ವಿವರ | ಕೈಗೊಂಡ ಕ್ರಮ |
|---|---|---|---|
| 1 | ಶ್ರೀ. ಎಸ್. ಸುಬ್ರಮಣಿ ರವರು ಮನವಿಯನ್ನು ಸಲ್ಲಿಸಿ ವನ್ನಾರಪೇಟೆ ವಾರ್ಡಿನ 1) ವೆಲ್ಲೇರಿಯಮ್ಮ ದೇವಸ್ಥಾನ ಬೀದಿ 2) ಬಾಲಾಜಿ ಥಿಯೇಟರ್ ಎದುರಿನ ರಸ್ತೆ 3) ಸೋಮಾನಂದ ಮೊದಲಿಯಾರ್ ಸ್ಟ್ರೀಟ್ ರಸ್ತೆಗಳು ಬಹಳಷ್ಟು ಹದಗೆಟ್ಟಿದ್ದು, ರಸ್ತೆಗುಂಡಿಗಳು ಹೆಚ್ಚಾಗಿರುತ್ತವೆ. ಈ ಸಮಸ್ಯೆಯನ್ನು ಪರಿಹರಿಸುವಂತೆ ಕೋರಿರುತ್ತಾರೆ. | ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ | ಸದರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ರೂ. 10.00 ಕೋಟಿಗಳ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಸದರಿ ಕಾಮಗಾರಿಯ ಟೆಂಡರ್ ಅನುಮೋದನೆಗಾಗಿ ಸರ್ಕಾರಕ್ಕೆ ಕಡತವನ್ನು ಸಲ್ಲಿಸಲಾಗಿರುತ್ತದೆ. ಸರ್ಕಾರದಿಂದ ಅನುಮೋದನೆ ದೊರೆತ ಕೂಡಲೆ ಕಾಮಗಾರಿ ನಿರ್ವಹಿಸಲಾಗುವುದು ಎಂದು ತಿಳಿಸಿರುತ್ತಾರೆ. |
| 2 | **ಮುಸ್ತಫಾ ಖಾನ್ ರವರು ಸಲ್ಲಿಸಿರುವ ಮನವಿ ಸಲ್ಲಿಸಿ**<br>a) ವನ್ನಾರಪೇಟೆ ವಾರ್ಡಿನಲ್ಲಿ ಒಂದು Special Transfer (T C) ನ್ನು ಅಳವಡಿಸುವಂತೆ ಬೆಸ್ಕಾಂ ಇಂಜನಿಯರ್‌ಗಳಿಗೆ ಸೂಚನೆ ನೀಡುವಂತೆ ಕೋರಿರುತ್ತಾರೆ. | ಶ್ರೀ. ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ | Special Transfer (T C) ನ್ನು ಅಳವಡಿಸುವ ಕುರಿತು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದ್ದು, ಮೇಲಾಧಿಕಾರಿಗಳ ಆದೇಶದಂತೆ ಮುಂದಿನ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ |

| | | | |
|---|---|---|---|
| | b) ವನ್ನಾರಪೇಟೆ ವಾರ್ಡಿನ ಸೆಂಟ್ರಲ್ ಸ್ಟ್ರೀಟ್‌ನಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯಿಂದ ಸ್ಯಾನಿಟರಿ ಪೈಪ್‌ಲೈನ್ ಅಳವಡಿಸಬೇಕಾಗಿರುತ್ತದೆ, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಒದಗಿಸುವಂತೆ ಕೋರಿರುತ್ತಾರೆ. | ಶ್ರೀ. ಶ್ರೀನಿವಾಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ | ಸೆಂಟ್ರಲ್ ಸ್ಟ್ರೀಟ್‌ನಲ್ಲಿ ಸ್ಯಾನಿಟರಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿದ್ದು, ಅಂದಾಜು ಪಟ್ಟಿ ಅನುಮೋದನೆಗೊಂಡ ಕೂಡಲೇ ಕಾಮಗಾರಿ ನಿರ್ವಹಿಸಲಾಗುವುದು. |
| | c) ಮುಸ್ತಫಾ ರವರು ವಾರ್ಡಿನಲ್ಲಿರುವ ಚಿಕನ್ ಮತ್ತು ಮಟನ್ ಅಂಗಡಿಗಳ ಮಾಲೀಕರು ಚಿಕನ್ ಮತ್ತು ಮಟನ್ ತ್ಯಾಜ್ಯವನ್ನು ವಿಸರ್ಜಿಸಲು ಯಾವ ಕ್ರಮಕೈಗೊಂಡಿರುತ್ತಾರೆ ಪರಿಶೀಲಿಸಲು ಕೋರಿರುತ್ತಾರೆ. | ಶ್ರೀ ಶ್ರೀನಿವಾಸ್ ಪಶುಸಂಗೋಪನಾ ಅಧಿಕಾರಿ (ಪೂರ್ವ) ಬಿಬಿಎಂಪಿ | - |
| | d) ಮುಸ್ತಫಾ ರವರು ವಾರ್ಡಿನಲ್ಲಿರುವ ಮುಖ್ಯರಸ್ತೆಗಳಲ್ಲಿ ಮತ್ತು ಅಡ್ಡರಸ್ತೆಗಳಲ್ಲಿ ನಾಮಫಲಕಗಳನ್ನು ಬದಲಾಯಿಸುವಂತೆ ಕೋರಿರುತ್ತಾರೆ. | ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ದೊಮ್ಮಲುರು ಉಪ ವಿಭಾಗ, ಬಿಬಿಎಂಪಿ | ನಾಮಫಲಕಗಳನ್ನು ಬದಲಾಯಿಸುವ ಕಾಮಗಾರಿಯನ್ನು ಹೊಸ ಕ್ರಿಯಾಯೋಜನೆಯಲ್ಲಿ ಸೇರಿಸಿಕೊಂಡು ನಿರ್ವಹಿಸಲಾಗುವುದು ಎಂದು ತಿಳಿಸಿರುತ್ತಾರೆ. |

- **ಇಂದಿನ ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

1. ವನ್ನಾರಪೇಟೆ ವಾರ್ಡಿನ ಬಿ.ಡಿ.ಎ. ನಿವಾಸಿಗಳು ಮನವಿ ಸಲ್ಲಿಸಿ, ಬಿ.ಡಿ.ಎ. ಪ್ರದೇಶದಲ್ಲಿ ವಸತಿ ಪ್ರದೇಶವನ್ನು ವಾಣಿಜ್ಯ ಪ್ರದೇಶವನ್ನಾಗಿ ಮಾರ್ಪಡಿಸುತ್ತಿರುವ ಬಗ್ಗೆ.
2. ಸಿ. ಮಾಲಕೊಂಡಯ್ಯ ರವರು ಮನವಿಯನ್ನು ಸಲ್ಲಿಸಿ:
    a) ವಾರ್ಡಿನ ಫೇರ್‌ಲ್ಯಾಂಡ್ ಹತ್ತಿರ ಛೇಂಬರ್ ರಿಪೇರಿ ಕುರಿತು ಮನವಿ ಮಾಡಿರುತ್ತಾರೆ.
    b) ಫರ್ದರ್ ಎಕ್ಸ್‌ಟೆನ್ಷನ್ ನಲ್ಲಿ ಸರ್ಕಾರಿ ಆಸ್ಪತ್ರೆ ಸುತ್ತಮುತ್ತಲ ಪ್ರದೇಶದಲ್ಲಿ ಸಿಲ್ಟ್ ತೆರವುಗೊಳಿಸುವಂತೆ ಮನವಿ ಮಾಡಿರುತ್ತಾರೆ.
    c) ಸೊನ್ನೇನಹಳ್ಳಿ ಮತ್ತು ಆಂಧ್ರ ಲೇನ್ ಪ್ರದೇಶದಲ್ಲಿರುವ ಬಡವರಿಗೆ ಹಕ್ಕುಪತ್ರ ನೀಡುವಂತೆ ಮನವಿ ಮಾಡಿರುತ್ತಾರೆ.
    d) ಫೇರ್‌ಲ್ಯಾಂಡ್ ಹತ್ತಿರ ಡಾ|| ಅಂಬೇಡ್ಕರ್ ಸ್ಲಂ ಪ್ರದೇಶದಲ್ಲಿ Water plant ಸ್ಥಾಪಿಸುವಂತೆ ಕೋರಿರುತ್ತಾರೆ.
    e) ವಿವೇಕನಗರದ ಎಂ.ಎಸ್. ಬಿಲ್ಡಿಂಗ್ ರಸ್ತೆಯಲ್ಲಿ ವಾಹನಗಳ ನಿಲುಗಡೆ ಕುರಿತು.
    f) ಸೊನ್ನೇನಹಳ್ಳಿ 2ನೇ ಮುಖ್ಯರಸ್ತೆಯಲ್ಲಿ Disilting ಮಾಡಲು ಮನವಿ ಮಾಡಿರುತ್ತಾರೆ.
3. ಅಜಮ್ ರವರು ಮನವಿಯನ್ನು ಸಲ್ಲಿಸಿ ಎನ್.ಎ.ಹ್ಯಾರೀಸ್ ಸರ್ಕಲ್ ರಸ್ತೆ, ದೋಬಿ ಘಾಟ್ ಹತ್ತಿರ Road Hump ಅಳವಡಿಸಲು ಕೋರಿರುತ್ತಾರೆ.
4. ಎಂ. ಪ್ರಭಾಕರ್ ರವರು ಮನವಿ ಸಲ್ಲಿಸಿ:
    a) ವಿವೇಕನಗರ, ಆಂಧ್ರ ಕಾಲೋನಿ ಪ್ರದೇಶದಲ್ಲಿ ಸ್ಯಾನಿಟರಿ ಲೈನ್ ಬ್ಲಾಕೇಜ್ ಹೆಚ್ಚಾಗಿರುತ್ತದೆ, ಕಾಲಾನುಕಾಲಕ್ಕೆ ಕ್ಲೀನಿಂಗ್ ಕೆಲಸ ನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ.
    b) ವಿವೇಕನಗರ, ಆಂಧ್ರ ಕಾಲೋನಿ ಪ್ರದೇಶದಲ್ಲಿ ಬೀದಿ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ.
    c) ಎಲ್ಲಾ ಪೋಲೀಸ್ ಠಾಣೆಗಳಲ್ಲಿ Cyber Crime Division ಸ್ಥಾಪಿಸಲು ಕೋರಿರುತ್ತಾರೆ.

**5.** ಸುಬ್ರಮಣಿ ರವರು ಮನವಿ ಸಲ್ಲಿಸಿ:

a) ವೆಲ್ಲೇರಿಯಮ್ಮ ದೇವಸ್ಥಾನ ರಸ್ತೆ, ಸೊಮಾನಂದ ಮೊದಲಿಯರ್ ರಸ್ತೆ, ಸಂಜೀವಪುರ ಮತ್ತು ರಾಮಯ್ಯ ರಸ್ತೆ ಮುನೇಶ್ವರ ದೇವಸ್ಥಾನ ಹತ್ತಿರ, ವನ್ನಾರಪೇಟೆ ಈ ರಸ್ತೆಗಳಲ್ಲಿ ರಸ್ತೆಗುಂಡಿಗಳು ಹೆಚ್ಚಾಗಿದ್ದು, ಈ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ.

b) ಸಂಜೀವಪುರ ಪ್ರದೇಶದಲ್ಲಿ ಹೊಸ ಬೋರ್‌ವೆಲ್ ಹಾಕಿಸಿ ನೀರು ಸರಬರಾಜು ಮಾಡಲು ಕೋರಿರುತ್ತಾರೆ.

c) ಹಾಗೂ ಮೇಲ್ಕಂಡ ಪ್ರದೇಶಗಳಲ್ಲಿ ಸರಬರಾಜಾಗುತ್ತಿರುವ ಕಲುಷಿತ ನೀರಿನ ಸಮಸ್ಯೆ ಪರಿಹರಿಸಲು ಕೋರಿರುತ್ತಾರೆ.

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

| ಕ್ರ. ಸಂ | ಚರ್ಚಿಸಿದ ವಿಷಯಗಳು | ತೆಗೆದುಕೊಳ್ಳಬೇಕಾದ ಕ್ರಮ | ಕ್ರಮಕೈಗೊಳ್ಳಬೇಕಾ ಅಧಿಕಾರಿಗಳ ವಿವರ |
|---|---|---|---|
| 1 | ವನ್ನಾರಪೇಟೆ ವಾರ್ಡಿನ ಬಿ.ಡಿ.ಎ. ನಿವಾಸಿಗಳು ಮನವಿ ಸಲ್ಲಿಸಿ, ಬಿ.ಡಿ.ಎ. ಪ್ರದೇಶದಲ್ಲಿ ವಸತಿ ಪ್ರದೇಶವನ್ನು ವಾಣಿಜ್ಯ ಪ್ರದೇಶವನ್ನಾಗಿ ಮಾರ್ಪಡಿಸುತ್ತಿರುವುದನ್ನು ನಿಲ್ಲಿಸುವಂತೆ ಮನವಿ ಸಲ್ಲಿಸಿರುತ್ತಾರೆ. | ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಶಾಂತಿನಗರ ವಲಯದ ಆರೋಗ್ಯ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ. | ಶ್ರೀ ಶ್ರನಿವಾಸ್<br>ಆರೋಗ್ಯ ವೈದ್ಯಾಧಿಕಾರಿಗಳು<br>ಶಾಂತಿನಗರ ವಲಯ, ಬಿಬಿಎಂಪಿ |
| ಸಿ. ಮಾಲಕೊಂಡಯ್ಯ ರವರು ಮನವಿಯನ್ನು ಸಲ್ಲಿಸಿ: | | | |
| 2 | a) ವಾರ್ಡಿನ ಫೇರ್‌ಲ್ಯಾಂಡ್ ಹತ್ತಿರ ಇರುವ 7 ಛೇಂಬರ್‌ಗಳಲ್ಲಿ 3 ಛೇಂಬರ್‌ಗಳನ್ನು ರಿಪೇರಿ ಮಾಡಲಾಗಿದ್ದು, ಉಳಿದ ಛೇಂಬರ್‌ಗಳನ್ನು ಕೂಡಲೇ ರಿಪೇರಿ ಮಾಡುವಂತೆ ಮನವಿ ಮಾಡಿರುತ್ತಾರೆ | ಈ ಕುರಿತು ಅಗತ್ಯ ಕ್ರಮವಹಿಸಿ, ವರದಿ ಸಲ್ಲಿಸುವಂತೆ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯು.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| | b) ಫರ್ದರ್ ಎಕ್ಸ್‌ಟೆನ್ಷನ್ ನಲ್ಲಿ ಸರ್ಕಾರಿ ಆಸ್ಪತ್ರೆ ಸುತ್ತಮುತ್ತಲ ಪ್ರದೇಶದಲ್ಲಿ ಸಿಲ್ಟ್ ತೆರವುಗೊಳಿಸುವಂತೆ ಮನವಿ ಮಾಡಿರುತ್ತಾರೆ. | ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ದೊಮ್ಮಲೂರು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿರುತ್ತಾರೆ. | ಶ್ರೀ. ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ದೊಮ್ಮಲುರು ಉಪ ವಿಭಾಗ, ಬಿಬಿಎಂಪಿ |
| | c) ಸೊನ್ನೇನಹಳ್ಳಿ ಮತ್ತು ಆಂದ್ರ ಲೇನ್ ಪ್ರದೇಶದಲ್ಲಿರುವ ಬಡವರಿಗೆ ಹಕ್ಕುಪತ್ರ ನೀಡುವಂತೆ ಮನವಿ ಮಾಡಿರುತ್ತಾರೆ. | ಈ ಕುರಿತು ಸಹಾಯಕ ಕಂದಾಯ ಅಧಿಕಾರಿಗಳು, ದೊಮ್ಮಲೂರು ಉಪ ವಿಭಾಗ ರವರಿಗೆ ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ. | ಶ್ರೀ ಚಂದ್ರಪ್ಪ ಕೆ.ಬಿ<br>ಸಹಾಯಕ ಕಂದಾಯ ಅಧಿಕಾರಿಗಳು<br>ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| | d) ಫೇರ್‌ಲ್ಯಾಂಡ್ ಹತ್ತಿರ ಡಾ॥ ಅಂಬೇಡ್ಕರ್ ಸ್ಲಂ ಪ್ರದೇಶದಲ್ಲಿ Water plant ಸ್ಥಾಪಿಸುವಂತೆ ಕೋರಿರುತ್ತಾರೆ. | ಸಾರ್ವಜನಿಕರಿಗೆ ಅನುಕೂಲವಾಗುವಂತೆ ಫೇರ್‌ಲ್ಯಾಂಡ್ ಹತ್ತಿರ ಡಾ॥ ಅಂಬೇಡ್ಕರ್ ಸ್ಲಂ ಪ್ರದೇಶದಲ್ಲಿ Water plant ಸ್ಥಾಪಿಸಲು ಅಗತ್ಯ ಕ್ರಮವಹಿಸುವಂತೆ ದೊಮ್ಮಲೂರು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ. | ಶ್ರೀ. ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ದೊಮ್ಮಲುರು ಉಪ ವಿಭಾಗ, ಬಿಬಿಎಂಪಿ |
| | e) ವಿವೇಕನಗರದ ಎಂ.ಎಸ್. ಬಿಲ್ಡಿಂಗ್ ರಸ್ತೆಯಲ್ಲಿ ವಾಹನಗಳ ನಿಲುಗಡೆ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಆಗುತ್ತಿದ್ದು, ಈ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ. | ಈ ಬಗ್ಗೆ ಸಂಚಾರಿ ಪೊಲೀಸ್ ಠಾಣೆಗೆ ಪತ್ರ ಬರೆದು ಅಗತ್ಯ ಕ್ರಮವಹಿಸುವಂತೆ ಕೋರಿ, ಸಮಸ್ಯೆ ಪರಿಹರಿಸಲಾಗುವುದು ಎಂದು ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ. | ವಿವೇಕನಗರ ಸಂಚಾರಿ ಪೊಲೀಸ್ ಠಾಣೆ |

| | | | |
|---|---|---|---|
| | f) ಸೊಣ್ಣೇನಹಳ್ಳಿ 2ನೇ ಮುಖ್ಯರಸ್ತೆಯಲ್ಲಿ Disilting ಮಾಡಲು ಮನವಿ ಮಾಡಿರುತ್ತಾರೆ | ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ದೊಮ್ಮಲೂರು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿರುತ್ತಾರೆ. | ಶ್ರೀ. ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ದೊಮ್ಮಲುರು ಉಪ ವಿಭಾಗ, ಬಿಬಿಎಂಪಿ |
| 3 | ಅಜಮ್ ರವರು ಮನವಿಯನ್ನು ಸಲ್ಲಿಸಿ ಎನ್.ಎ.ಹ್ಯಾಲೀಸ್ ಸರ್ಕಲ್ ರಸ್ತೆ, ದೋಬಿ ಘಾಟ್ ಹತ್ತಿರ Road Hump ಅಳವಡಿಸಲು ಕೋರಿರುತ್ತಾರೆ. | ಈ ಬಗ್ಗೆ ಸಂಚಾರ ಪೊಲೀಸ್ ಮತ್ತು ಪಾಲಿಕೆಯ Traffic Engineering Cell ಇಲಾಖೆಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ. | ಸಂಚಾರಿ ಪೊಲೀಸ್ ಇಲಾಖೆ<br>Traffic Engineering Cell, BBMP |
| **ಎಂ. ಪ್ರಭಾಕರ್ ರವರು ಮನವಿ ಸಲ್ಲಿಸಿ:** | | | |
| 4 | a) ವಿವೇಕನಗರ, ಆಂದ್ರ ಕಾಲೋನಿ ಪ್ರದೇಶದಲ್ಲಿ ಸ್ಯಾನಿಟರಿ ಲೈನ್ ಬ್ಲಾಕೇಜ್ ಹೆಚ್ಚಾಗಿರುತ್ತದೆ, ಕಾಲಾನುಕಾಲಕ್ಕೆ ಕ್ಲೀನಿಂಗ್ ಕೆಲಸ ನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿ, ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ. | ಈ ಕುರಿತು ಅಗತ್ಯ ಕ್ರಮವಹಿಸಿ, ವರದಿ ಸಲ್ಲಿಸುವಂತೆ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯು.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| | b) ವಿವೇಕನಗರ, ಆಂದ್ರ ಕಾಲೋನಿ ಪ್ರದೇಶದಲ್ಲಿ ಬೀದಿ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ. | ಈ ಕುರಿತು ಅಗತ್ಯ ಕ್ರಮವಹಿಸಿ, ಸಮಸ್ಯೆ ಪರಿಹರಿಸುವಂತೆ ಪಾಲಿಕೆಯ ವಿದ್ಯುತ್ ವಿಭಾಗದ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ. | ಶ್ರೀ. ಮಂಜಪ್ಪ<br>ಕಿರಿಯ ಅಭಿಯಂತರರು<br>ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. |
| | c) ಸಮಾಜದಲ್ಲಿ ಸೈಬರ್ ಕ್ರೈಂ ಪ್ರಕರಣಗಳು ಮತ್ತು ಮೊಬೈಲ್ ಕಳ್ಳತನದ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ Cyber Crime Division ಸ್ಥಾಪಿಸಲು ಕೋರಿರುತ್ತಾರೆ | ಈ ಬಗ್ಗೆ ಪೊಲೀಸ್ ಇಲಾಖೆಯ ಗಮನಕ್ಕೆ ತರಲಾಗುವುದು ಎಂದು ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ. | ಪೊಲೀಸ್ ಇಲಾಖೆ |
| **ಸುಬ್ರಮಣಿ ರವರು ಮನವಿ ಸಲ್ಲಿಸಿ:** | | | |
| 5 | a) ವೆಲ್ಲೇರಿಯಮ್ಮ ದೇವಸ್ಥಾನ ರಸ್ತೆ, ಸೊಮಾನಂದ ಮೊದಲಿಯರ್ ರಸ್ತೆ, ಸಂಜೀವಪುರ ಮತ್ತು ರಾಮಯ್ಯ ರಸ್ತೆ ಮುನೇಶ್ವರ ದೇವಸ್ಥಾನ ಹತ್ತಿರ, ವನ್ನಾರಪೇಟೆ ಈ ರಸ್ತೆಗಳಲ್ಲಿ ರಸ್ತೆಗುಂಡಿಗಳು ಹೆಚ್ಚಾಗಿದ್ದು, ಈ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ<br><br>b) ಸಂಜೀವಪುರ ಪ್ರದೇಶದಲ್ಲಿ ಹೊಸ ಬೋರ್‌ವೆಲ್ ಹಾಕಿಸಿ ನೀರು ಸರಬರಾಜು ಮಾಡಲು ಕೋರಿರುತ್ತಾರೆ | ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ದೊಮ್ಮಲೂರು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿರುತ್ತಾರೆ. | ಶ್ರೀ. ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ದೊಮ್ಮಲುರು ಉಪ ವಿಭಾಗ, ಬಿಬಿಎಂಪಿ |
| | c) ವೆಲ್ಲೇರಿಯಮ್ಮ ದೇವಸ್ಥಾನ ರಸ್ತೆ, ಸೊಮಾನಂದ ಮೊದಲಿಯರ್ ರಸ್ತೆ, ಸಂಜೀವಪುರ ಮತ್ತು ರಾಮಯ್ಯ ರಸ್ತೆ ಮುನೇಶ್ವರ ದೇವಸ್ಥಾನ ಪ್ರದೇಶಗಳಲ್ಲಿ ಸರಬರಾಜಾಗುತ್ತಿರುವ ಕಲುಷಿತ ನೀರಿನ ಸಮಸ್ಯೆ ಪರಿಹರಿಸಲು ಕೋರಿರುತ್ತಾರೆ | ಈ ಕುರಿತು ಅಗತ್ಯ ಕ್ರಮವಹಿಸಿ, ವರದಿ ಸಲ್ಲಿಸುವಂತೆ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯು.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಮಾನ್ಯ ಶಾಸಕರಿಗೆ, ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ: 115 ವನ್ನಾರಪೇಟೆ**
**ಬಿ.ಬಿ.ಎಂ.ಪಿ**

22/10/2021

**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 115 ವನ್ನಾರಪೇಟೆ**

**<u>ಪ್ರತಿಯನ್ನು:</u>**

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
6. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.